1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.14/2023

ದಿಃ 06.10.2023

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ಶಿಲ್ಪಾ |
| ಗಂಡನ ಹೆಸರು | ಃ | ಸರ್ವೇಶ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ರಾಜಿಗಾಂಧಿಪುರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ 2 ನನ್ನ ತಾಯಿ.

2. ಚಾಸಾ 3 ನನ್ನ ಗಂಡ.

3. ನಾನು ಚಾಸಾ 4 ರಿಂದ 6 ಇವರನ್ನು ನೋಡಿರುತ್ತೇನೆ.

4.ಚಾಸಾ 7 ಮತ್ತು 8 ನನಗೆ ಗೊತ್ತು.

5.ನಾನು ಹಿಂದೂ ಆದಿ ಕರ್ನಾಟಕ ಜಾತಿಗೆ ಸೇರಿದವಳಾಗಿರುತ್ತೇನೆ.

6. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

7. ಅವರಿಗೆ ನನ್ನ ಜಾತಿ ಗೊತ್ತು.

8. ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಸುಮಾರು 4 ವರ್ಷಗಳ ಕಾಲ ನಾನು 1ನೇ ಆರೋಪಿ ಈತನ ರೇಷ್ಮೇ ಪ್ಯಾಕ್ಟರಿಯಲ್ಲಿ ನಾನು, ನನ್ನ ತಾಯಿಯಾದ ಚಾಸಾ 2 ಮತ್ತು ನನ್ನ ತಂಗಿಯಾದ ಚೈತ್ರ ರೇಷ್ಮೇ ಕೆಲಸ ಮಾಡುತ್ತಿದ್ದೆವು.

9. ನನ್ನ ತಂಗಿ ಚೈತ್ರ ಇವಳ ವಿವಾಹವಾದ ಮೇಲೆ ಅಲ್ಲಿ ಕೆಲಸ ಬಿಟ್ಟಿರುತ್ತಾಳೆ.

10.ದಿಃ 04.07.2022 ರಂದು ನಾನು 8 ತಿಂಗಳ ಗರ್ಭಿಣಿಯಾಗಿದ್ದರಿಂದ ಸದರಿ ರೇಷ್ಮೇ ಕೆಲಸಕ್ಕೆ ಬರುವುದಿಲ್ಲ ಎಂದು 1ನೇ ಆರೋಪಿತನಿಗೆ ಹೇಳಿದ್ದೆನು.

11.ಆಗ 1ನೇ ಆರೋಪಿತನು ತಮ್ಮ ಬಳಿಯಿಂದ ಪಡೆದುಕೊಂಡಿದ್ದ ಮುಂಗಡ ಹಣ 20 ಸಾವಿರ ರೂ.ಗಳನ್ನು ತಕ್ಷಣ ಮರಳಿ ಕೊಡಬೇಕು ಎಂದು ನನಗೆ ಹೇಳಿರುತ್ತಾನೆ.

12.ಆ ಕಾರಣ ಬೇರೆ ಪ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗಿ ಅಲ್ಲಿಂದ ಮುಂಗಡ ಹಣವನ್ನು ಪಡೆದುಕೊಂಡು 1ನೇ ಆರೋಪಿತನಿಗೆ ಕೊಡುವ ಉದ್ದೇಶದಿಂದ ಬೇರೆ ರೇಷ್ಮೇ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು.

13. ಅದೇ ದಿನ ಬೆಳಿಗ್ಗೆ ಸುಮಾರು 11ಗಂಟೆ ಸಮಯದಲ್ಲಿ ಹಣ ಕೊಡುವ ಬದಲಾಗಿ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಿದ್ದಿಯಾ

ಎಂದು ಮೂರು ಜನ ಆರೋಪಿತರು ನಾನು ಕೆಲಸ ಮಾಡುತ್ತಿದ್ದ ಪ್ಯಾಕ್ಟರಿಗೆ ಬಂದು 1ನೇ ಆರೋಪಿತನು ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ.

14.ಆ ಸಮಯದಲ್ಲಿ ಮೂವರು ನನ್ನ ಜುಟ್ಟು ಹಿಡಿದು ಬಟ್ಟೆ ಹಿಡಿದು ಎಳೆದು ಹೊರ ತಂದು ಕಾಲಿನಿಂದ ಒದ್ದಿದ್ದಲ್ಲದೇ, 1ನೇ ಆರೋಪಿತನು ನನ್ನ ಕೈಯನ್ನು ತಿರುಚುತ್ತಾನೆ.

15. ಆ ಸಮಯದಲ್ಲಿ ಆರೋಪಿತರೆಲ್ಲಾ ನನಗೆ ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈದಿರುತ್ತಾರೆ.

16. ಅದೂ ಅಲ್ಲದೇ, ರಾಮನಗರಕ್ಕೆ ಬಂದಲ್ಲಿ ನನಗೂ ಮತ್ತು ಚಾಸಾ 3 ಈತನಿಗೂ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣದ ಬೆದರಿಕೆ ಹಾಕಿರುತ್ತಾರೆ.

17. ಅದೇ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದವರು ಸದರಿ ಜಗಳವನ್ನು ನೋಡಿ ಬಿಡಿಸಿರುತ್ತಾರೆ.

18. ತದನಂತರ ನಾನು ರಾಮನಗದರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ.

19. ನಂತರ ನಾನು ಸದರಿ ಗಲಾಟೆಯ ವಿಚಾರವನ್ನು ಚಾಸಾ 2 ಮತ್ತು 3 ಇವರಿಗೆ ಹೇಳಿ ನಂತರ ಪೊಲೀಸ್ ಠಾಣೆಗೆ ಹೋಗಿ ದಿಃ 05.07.2022 ರಂದು ಒಂದು ಪಿರ್ಯಾದನ್ನು ಸಲ್ಲಿಸಿರುತ್ತೇನೆ.

20. ಮನೆಯ ಸದಸ್ಯರೆಲ್ಲಾ ಮನೆಗೆ ಬರಲು ತಡವಾಗಿದ್ದರಿಂದ ಅವರಿಗೆ ತಿಳಿಸಿ ಸದರಿ ಪಿರ್ಯಾದನ್ನು ಸಲ್ಲಿಸಲು ತಡವಾಗಿರುತ್ತದೆ.

21. ಸದರಿ ಪಿರ್ಯಾದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ 1 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ಈಗ ನಿಪಿ 1 ಎ ಎಂದು ಗುರುತಿಸಲಾಯಿತು.

22. ದಿಃ 06.07.2022 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನನ್ನ ತೋರಿಕೆಯ ಮೇರೆಗೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

23. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ 2 ಎಂದು ಮತ್ತು ಅದರ ಮೇಲೆ ಇರುವ ನನ್ನ ಸಹಿಯನ್ನು ಈಗ ನಿಪಿ 2 ಎ ಎಂದು ಗುರುತಿಸಲಾಯಿತು.

24. ಸದರಿ ನಿಪಿ 2ರ ಸಮಯದಲ್ಲಿ ಪೊಲೀಸರು 2 ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಕ್ರಮವಾಗಿ ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ವಿಎಸ್ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

25. 1ನೇ ಆರೋಪಿತನ ರೇಷ್ಮೆ ಪ್ಯಾಕ್ಟರಿಯಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗ ಕೆಲಸ ಮಾಡುತ್ತಿದ್ದೆನು ಎಂಬುವುದು ನಿಖರವಾಗಿ ಹೇಳಲು ಆಗುವುದಿಲ್ಲ.

26. ಯಾವ ದಿನಾಂಕದಂದು ನಾನು ಆ ಕೆಲಸ ಬಿಟ್ಟಿರುತ್ತೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

27. ದಿಃ 04.07.2022ರಂದು ನಾನು ಬೇರೆ ರೇಷ್ಮೇ ಪ್ಯಾಕ್ಟರಿ ಕೆಲಸಕ್ಕೆ ಹೋಗಿರುತ್ತೇನೆ.

28.ದಿಃ 04.07.2022ರಂದೇ 1ನೇ ಆರೋಪಿತನಿಗೆ ಆತನ ಪ್ಯಾಕ್ಟರಿಗೆ ನಾನು ಕೆಲಸಕ್ಕೆ ಬರುವುದಿಲ್ಲ ಎಂದು ತಿಳಿಸಿರುತ್ತೇನೆ.

29.ನಾನು ಕೆಲಸಕ್ಕೆ ಬೆಳಿಗ್ಗೆ 7.30ಕ್ಕೆ ಹೋಗುತ್ತೇನೆ.

30.ಆ ಜದಿನ ಬೆಳಿಗ್ಗೆ 7.30ರ ಸಮಯದಲ್ಲಿ ನಾನು 1ನೇ ಆರೋಪಿತನ ರೇಷ್ಮೇ ಪ್ಯಾಕ್ಟರಿಗೆ ಹೋಗಿರಲಿಲ್ಲ.

31. ನಾನು ಬೇರೆ ರೇಷ್ಮೇ ಪ್ಯಾಕ್ಟರಿಗೆ ಕೆಲಸಕ್ಕೆಂದು ಹೋದಾಗ ಆರೋಪಿತರು ನನಗೆ ಸಿಕ್ಕಿರಲಿಲ್ಲ ಎಂಬುವುದು ಸರಿ.

32.ಆ ದಿನ ನಾನು ಒಬ್ಬಳೇ ಕೆಲಸಕ್ಕೆ ಹೋಗಿದ್ದೆನು.

33. ಸದರಿ ನಾನು ಕೆಲಸಕ್ಕೆ ಹೋಗಿದ್ದ ರೇಷ್ಮೇ ಪ್ಯಾಕ್ಟರಿ ಯಲ್ಲಿ ಸುಮಾರು 10-12 ಜನ ಬೇರೆ ಕೆಲಸಗಾರರು ಸಹ ಇದ್ದರು.

34. ನಾವು ಪ್ಯಾಕ್ಟರಿಯಲ್ಲಿ ಕೆಲಸ ಮಾಡುವಾಗ ಬೇರೆ ಯಾವುದೇ ವ್ಯಕ್ತಿ ಅಲ್ಲಿಗೆ ಬಂದು ನಮ್ಮನ್ನು ಭೇಟಿ ಆಗಬೇಕಾದರೆ ನಾವು ಕೆಲಸ ಮಾಡುತ್ತಿರುವ ಪ್ಯಾಕ್ಟರಿ ಮಾಲೀಕರ ಪೂರ್ವಾನುಮತಿ ಪಡೆಯಬೇಕಾಗುತ್ತದೆ ಎಂಬುವುದು ಸರಿ.

35. ಘಟನೆ ನಡೆದ ಸ್ಥಳಕ್ಕೂ ಮತ್ತು ಪೊೀಸ್ ಠಾಣೆಗೂ ಸುಮಾರು ಒಂದು ಕಿ.ಮೀ. ಅಂತರ ಇರುತ್ತದೆ.

36.ಘಟನಾ ಸ್ಥಳಕ್ಕೂ ಮತ್ತು ನಮ್ಮ ಊರಿಗೂ ಸುಮಾರು 8 ಕಿ.ಮೀ. ಅಂತರ ಇರುತ್ತದೆ.

37. ನಾನು ಊರಿಗೆ ಹೋಗಬೇಕಾದರೆ ಪೊಲೀಸ್ ಠಾಣೆಯ ಮುಂದಿನಿಂದಲೇ ಹಾಯ್ದು ಹೋಗಬೇಕಾಗುತ್ತದೆ ಎಂಬುಕವುದು ಸರಿ.

38.ಆ ಸಮಯದಲ್ಲಿ ನನಗೆ ಪಿರ್ಯಾದನ್ನು ಸಲ್ಲಿಸಲು ತೊಂದರೆ ಇತ್ತೆ ಎಂದು ಪ್ರಶ್ನಿಸಿದರೆ ನನಗೆ ಭಯ ಇತ್ತು ಎಂದು ಹೇಳುತ್ತೇನೆ.

39. ಸದರಿ ವಿಚಾರವನ್ನು ನಾನು ನನ್ನ ಪಿರ್ಯಾದನಲ್ಲಿ ಕಾಣಿಸಿರುವುದಿಲ್ಲ ಎಂಬುವುದು ಸರಿ.

40. ಸದರಿ ಪಿರ್ಯಾದನ್ನು ನಾನು ಬರೆದಿರುವುದಿಲ್ಲ ಎಂಬುವುದು ಸರಿ.

41.ಸದರಿ ಪಿರ್ಯಾದನ್ನು ದಲಿತ ಸಂಘಟನೆಯವರು ಬರೆದಿರುತ್ತಾರೆ ಎಂಬುವುದು ಸರಿ.

42. ದಲಿತ ಸಂಘಟನೆಯವರು ದೂರು ಕೊಡಲು ಹೇಳಿದ್ದಕ್ಕೆ ನಾನು ದೂರು ಸಲ್ಲಿಸಿದ್ದೇನೆ ಎಂದರೆ ನಾನು ಹೇಳಿದ್ದರಿಂದ ಅವರು ಸಲ್ಲಿಸಿರುತ್ತಾರೆ ಎಂದು ಹೇಳುತ್ತೇನೆ.

43.ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ 1ನೇ ಆರೋಪಿತನಿಂದ ನಾನು ಮುಗಂಡ ಹಣವಾಗಿ 20 ಸಾವಿರ ರೂ.ಗಳನ್ನು ಮರಳಿ ಕೊಡುವುದರಿಂದ ತಪ್ಪಿಸಿಕೊಳ್ಳಲು ದಲಿತ ಸಂಘಟನೆ ಯವರ ಚಿತಾವಣಿ ಮೇರೆಗೆ ನಾನು ಸುಳ್ಳು ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂಬುವುದು ಸರಿಯಲ್ಲ.

44. ನಾನು ನನ್ನ ಜಾತಿಯನ್ನು ಆರೋಪಿತರಿಗೆ ಹೇಳಿದ್ದೆನು.

45. ಘಟನೆಯ ಸ್ಥಳದ ಚೆಕ್ ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ.

46. ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾಗ ಯಾವುದೇ ಎಲೆಕ್ಟ್ರಾನಿಕ್ ಉಪಕರಣವನ್ನು ತಂದಿರಲಿಲ್ಲ ಎಂಬುದು ಸರಿ .

47.ನಿ ಪಿ 2 ರ ಮೇಲೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂಬುವುದು ಸರಿ.

48.ನಿಪಿ 2ರಲ್ಲಿ ಬರೆದಿರುವ ವಿಚಾರವನ್ನು ನನಗೆ ಓದಿ ಹೇಳಿದ ಅದರ ಮೇಲೆ ಕೇವ ಸಹಿ ಮಾಡು ಎಂದಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ.

49. ನಿಪಿ 2ರ ಮೇಲೆ ಬೇರೆ ಯಾರು ಸಹಿ ಮಾಡಿರುವುದಿಲ್ಲ.

50. ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲವಾದರೂ ಸಹ ಈಗ ಸುಳ್ಳು ನುಡಿಯುತ್ತಿದ್ದೇನೆ ಎಂಬುವುದು ಸರಿಯಲ್ಲ.

51. ಪೊಲೀಸ್ ಠಾಣೆಯ ಅಕ್ಕಪಕ್ಕದಲ್ಲಿಯೂ ಸಹ ರೇಷ್ಮೇ ಪ್ಯಾಕ್ಟರಿ ಇರುತ್ತದೆ ಎಂಬುವುದು ಸರಿ.

52.ನಿಪಿ 3 ಮತ್ತು 4ಗಳನ್ನು ಪೊಲೀಸರು ತಮ್ಮ ಠಾಣೆಯ ಅಕ್ಕಪಕ್ಕದಲ್ಲಿರುವ ರೇಷ್ಮೇ ಪ್ಯಾಕ್ಟರಿಯ ಮುಂದೆ ತೆಗೆಸಿದ್ದು ಇರುತ್ತವೆ ಎಂಬುವುದು ಸರಿಯಲ್ಲ.

53.ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆಪಡೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

54. ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಸುಮಾರು 4 ವರ್ಷಗಳ ಕಾಲ ನಾನು 1ನೇ ಆರೋಪಿ ಈತನ ರೇಷ್ಮೇ ಪ್ಯಾಕ್ಟರಿಯಲ್ಲಿ ನಾನು, ನನ್ನ ತಾಯಿಯಾದ ಚಾಸಾ 2 ಮತ್ತು ನನ್ನ ತಂಗಿಯಾದ ಚೈತ್ರ ರೇಷ್ಮೇ ಕೆಲಸ ಮಾಡುತ್ತಿದ್ದೆವು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

55. ನನ್ನ ತಂಗಿ ಚೈತ್ರ ಇವಳ ವಿವಾಹವಾದ ಮೇಲೆ ಅಲ್ಲಿ ಕೆಲಸ ಬಿಟ್ಟಿರುತ್ತಾಳೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

56.ದಿಃ 04.07.2022ರಂದು ನಾನು 8ತಿಂಗಳ ಗರ್ಭಿಣಿಯಾಗಿದ್ದರಿಂದ ಸದರಿ ರೇಷ್ಮೇ ಕೆಲಸಕ್ಕೆ ಬರುವುದಿಲ್ಲ ಎಂದು 1ನೇ ಆರೋಪಿತನಿಗೆ ಹೇಳಿದ್ದೆನು,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

57.ಆಗ 1ನೇ ಆರೋಪಿತನು ತಮ್ಮ ಬಳಿಯಿಂದ ಪಡೆದುಕೊಂಡಿದ್ದ ಮುಂಗಡ ಹಣ 20 ಸಾವಿರ ರೂ.ಗಳನ್ನು ತಕ್ಷಣ

ಮರಳಿ ಕೊಡಬೇಕು ಎಂದು ನನಗೆ ಹೇಳಿರುತ್ತಾನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

58.ಆ ಕಾರಣ ಬೇರೆ ಪ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗಿ ಅಲ್ಲಿಂದ ಮುಂಗಡ ಹಣವನ್ನು ಪಡೆದುಕೊಂಡು 1ನೇ ಆರೋಪಿತನಿಗೆ ಕೊಡುವ ಉದ್ದೇಶದಿಂದ ಬೇರೆ ರೇಷ್ಮೇ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

59. ಅದೇ ದಿನ ಬೆಳಿಗ್ಗೆ ಸುಮಾರು 11ಗಂಟೆ ಸಮಯದಲ್ಲಿ ಹಣ ಕೊಡುವ ಬದಲಾಗಿ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಿದ್ದಿಯಾ ಎಂದು ಮೂರು ಜನ ಆರೋಪಿತರು ನಾನು ಕೆಲಸ ಮಾಡುತ್ತಿದ್ದ ಪ್ಯಾಕ್ಟರಿಗೆ ಬಂದು 1ನೇ ಆರೋಪಿತನು ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

60.ಆ ಸಮಯದಲ್ಲಿ ಮೂವರು ನನ್ನ ಜುಟ್ಟು ಹಿಡಿದು ಬಟ್ಟೆ ಹಿಡಿದು ಎಳೆದು ಹೊರ ತಂದು ಕಾಲಿನಿಂದ ಒದ್ದಿದ್ದಲ್ಲದೇ, 1ನೇ ಆರೋಪಿತನು ನನ್ನ ಕೈಯನ್ನು ತಿರುಚುತ್ತಾನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

61. ಆ ಸಮಯದಲ್ಲಿ ಆರೋಪಿತರೆಲ್ಲಾ ನನಗೆ ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈದಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

62. ಅದೂ ಅಲ್ಲದೇ, ರಾಮನಗರಕ್ಕೆ ಬಂದಲ್ಲಿ ನನಗೂ ಮತ್ತು ಚಾಸಾ 3 ಈತನಿಗೂ ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣದ ಬೆದರಿಕೆ ಹಾಕಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

63. ಅದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದವರು ಸದರಿ ಜಗಳವನ್ನು ನೋಡಿ ಬಿಡಿಸಿರುತ್ತಾರೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

64. ನಂತರ ನಾನು ಸದರಿ ಗಲಾಟೆಯ ವಿಚಾರವನ್ನು ಚಾಸಾ 2 ಮತ್ತು 3 ಇವರಿಗೆ ಹೇಳಿ ನಂತರ ಪೊಲೀಸ್ ಠಾಣೆಗೆ ಹೋಗಿ ದಿಃ 05.07.2022 ರಂದು ಒಂದು ಪಿರ್ಯಾದನ್ನು ಸಲ್ಲಿಸಿರುತ್ತೇನೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

65. ಮನೆಯ ಸದಸ್ಯರೆಲ್ಲಾ ಮನೆಗೆ ಬರಲು ತಡವಾಗಿದ್ದರಿಂದ ಅವರಿಗೆ ತಿಳಿಸಿ ಸದರಿ ಪಿರ್ಯಾದನ್ನು ಸಲ್ಲಿಸಲು ತಡವಾಗಿರುತ್ತದೆ,ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

66. ದಿಃ 06.07.2022 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನನ್ನ ತೋರಿಕೆಯ ಮೇರೆಗೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

67. ಸದರಿ ನಿಪಿ 2 ರ ಸಮಯದಲ್ಲಿ ಪೊಲೀಸರು 2 ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.